ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, July-Aug 2020, 10-14
©IIMRD, Mysuru
IIMRD JOURNALS
www.iimrd.com

# ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರ

ಶಿವಶರಣಪ್ಪ[1]

## ಪೀಠಿಕೆ

ನೇತಾಜಿ ಎಂದು ಕರೆಯಲ್ಪಡುತ್ತಿದ್ದ ಸುಭಾಷ್‌ಚಂದ್ರ ಬೋಸ್ ಓರಿಸ್ಸಾದ ಕಟಕ್‌ನಲ್ಲಿ 23ನೇ ಜನವರಿ 1897ರಲ್ಲಿ ಜನಿಸಿದರು. ತಂದೆ ಜಾನಕಿನಾಥ ಬೋಸ್ ತಾಯಿ ಪ್ರಭಾವತಿ ದೇವಿ ಇವರ ತಂದೆ ವೃತ್ತಿಯಲ್ಲಿ ವಕೀಲರಾಗಿದ್ದರು. ತಮ್ಮ ಪ್ರಾಥಮಿಕ ಶಿಕ್ಷಣ ಕಟಕ್‌ದಲ್ಲಿ ಮುಗಿಸಿದ ಬೋಸ್‌ರವರು ತಮ್ಮ 15ನೇ ವಯಸ್ಸಿನಲ್ಲಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಿಂದ ಪ್ರಭಾವಿತರಾಗಿದ್ದರು. ಬೋಸ್‌ರವರು "ಭಾರತವನ್ನು ಪರಕೀಯರ ದಾಸ್ಯದಿಂದ ಮುಕ್ತಿಗೊಳಿಸಲು ಯುವಕರ ತ್ಯಾಗ ಮತ್ತು ಬಲಿದಾನದ ಅವಶ್ಯಕತೆಯಿದೆ" ಎಂಬ ಅರವಿಂದ ಘೋಷ್‌ರ ಮಾತುಗಳಿಂದ ತುಂಬಾ ಪ್ರಭಾವಿತರಾಗಿದ್ದ ಬೋಸ್‌ರವರು ಉನ್ನತ ವಿದ್ಯಾಭ್ಯಾಸವನ್ನು ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜ್‌ನಲ್ಲಿ ಮುಂದುವರೆಸಿ, 1919ರಲ್ಲಿ ಉನ್ನತ ಶ್ರೇಣಿಯಲ್ಲಿ ತಮ್ಮ ಬಿ.ಎ. ಪದವಿಯನ್ನು ಪೂರೈಸಿದರು. ಅವರ ತಂದೆಯ ಆಸೆಯಂತೆ ICS, ಪರೀಕ್ಷೆ ಕುಳಿತು 4ನೇ ಸ್ಥಾನದೊಂದಿಗೆ ಪಾಸಾದರು. ಇವರು ಆರಂಭದಿಂದಲೂ ಬ್ರೀಟಿಷರನ್ನು ವಿರೋಧಿಸುತ್ತಿದ್ದರಿಂದ ಬ್ರೀಟಿಷರ ಅಡಿಯಾಳಾಗಿ ಕೆಲಸ ಮಾಡಲು ಇಷ್ಟವಿರಲಿಲ್ಲ. ಆದುದರಿಂದ ಇವರು ಕಾರ್ಯ ನಿರ್ವಹಿಸುವ ಬದಲು ಲಂಡನಿನಲ್ಲಿ ತರಬೇತಿಯನ್ನು ಪಡೆಯದೇ 1921 ಜುಲೈ 16ರಂದು ಲಂಡನ್‌ನಿಂದ ಮುಂಬೈ ತಲುಪಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿದರು.

ಕಾಂಗ್ರೆಸ್ ತನ್ನದೆಯಾದ ನಿವಾಸವನ್ನು ಹೊಂದಿರಬೇಕು, ರಾಷ್ಟ್ರೀಯ ಸಮಸ್ಯೆಗಳ ಅಧ್ಯಯನಕ್ಕೆ ಪರಿಹಾರ ಸೂಚಿಸಲು ಸಂಶೋಧನಾ ಸಮೂಹ ಹೊಂದಿರಬೇಕು, ತುಳತಕ್ಕೊಳಗಾದ ವರ್ಗದವರ ಏಳಿಗೆಗೆ ಕಾಂಗ್ರೆಸ್ ಸ್ವಷ್ಟವಾದ ಯೋಜನೆಗಳು ಯಾವುವು ಎಂಬುದನ್ನು ಸ್ವಷ್ಟವಾಗಿ ತಿಳಿಸಬೇಕು ಎಂಬುದಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಮಾರ್ಗದರ್ಶನ ನೀಡಿದ್ದರು.

## ಗಾಂಧೀಜಿ ಮತ್ತು ದೇಶಬಂಧು ಸಿ.ಆರ್. ದಾಸರ ಭೇಟಿ

ಸುಭಾಷ ಚಂದ್ರಬೋಸ್‌ರವರು ಲಂಡನ್‌ನಿಂದ ಭಾರತಕ್ಕೆ ಬಂದ ನಂತರ ಗಾಂಧೀಜಿಯನ್ನು ಸಂಪರ್ಕಿಸಿ ಸ್ವಾತಂತ್ರ್ಯ ಬಗ್ಗೆ ಸುಧೀರ್ಘವಾದ ಚರ್ಚೆಯನ್ನು ಮಾಡಿದರು. ಆದರೆ ಈ ಸಂದರ್ಭದಲ್ಲಿ ಗಾಂಧೀಜಿಯ ತಾಳ್ಮೆಯ ಉತ್ತರ ಸುಭಾಷರಿಗೆ ತೃಪ್ತಿಯನ್ನು ತಂದು ಕೊಡಲಿಲ್ಲ. ಆದರೂ ಗಾಂಧೀಜಿಯ ಬೇಡಿಕೆಯಂತೆ ಕಲ್ಕತ್ತಗೆ ಹೋದರು. ಅಲ್ಲಿ ಸಿ.ಆರ್ ದಾಸರನ್ನು ಬೇಟಿ ಮಾಡಿ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಂಡರು. ಅದಾದ ನಂತರ ಸಿ.ಆರ್ ದಾಸರ ಹಿಂಬಾಲಕರಾಗಿ ಮುಂದುವರೆದರು. ಮುಂದುವರೆದು ಸಿ.ಆರ್ ದಾಸರು ಮುನ್ನಡೆಸುತ್ತಿದ್ದ ಆಂಗ್ಲ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ***ಫಾರ್ವರ್ಡ್***

[1] *ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಾಮನಗರ.*

ಎನ್ನುವ ದಿನಪತ್ರಿಕೆಯ ಸಂಪೂರ್ಣ ಜವಬ್ಧಾರಿಯನ್ನು ವಹಿಸಿಕೊಂಡು ಮುನ್ನಡೆಸುವಲ್ಲಿ ಯಶಸ್ವಿಯಾದರು. ಇವರು ಹಲವು ವರ್ಷಗಳ ಕಾಲ ಸಿ.ಆರ್ ದಾಸರ ಗರಡಿಯಲ್ಲಿ ಪಳಗಿದರು.

**ಕಾಂಗ್ರೆಸ್ ಅಧ್ಯಕ್ಷರಾಗಿ ಬೋಸ್**

1938ರಲ್ಲಿ ಸುಭಾಷರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ವಾತಂತ್ರ್ಯ ಗಳಿಕೆಗೆ ತೀವ್ರಗತಿಯ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಭಾರತ ಸ್ವಾತಂತ್ರ ಗಳಿಸಿದ ನಂತರ ಸಮಾಜವಾದದ ಹಿನ್ನಲೆಯಲ್ಲಿ ರಾಷ್ಟ್ರ ಕಟ್ಟಬೇಕೆಂದು ಕರೆಕೊಟ್ಟರು. ನೆಹರೂರವರ ಉಪಸ್ಥಿತಿಯಲ್ಲಿ ರಾಷ್ಟ್ರೀಯ ಯೋಜನಾ ಮಂಡಳಿಯನ್ನು ಸ್ಥಾಪಿಸುವ ನಿರ್ಧಾರವನ್ನು ಪ್ರಕಟಿಸಿದರು.

ಎರಡನೇ ಅವಧಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು. ಸಂದರ್ಭದಲ್ಲಿ ಬಲಪಂಥೀಯರು ಮತ್ತು ಎಡಪಂಥೀಯರ ಮಧ್ಯ ಹಲವು ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಕೊನೆಗೆ ಅಧ್ಯಕ್ಷೀಯ ಚುನಾವಣೆ ನಡೆಯಿತು. ಗಾಂಧೀಜಿಯ ಬೆಂಬಲವನ್ನು ಪಡೆದಿದ್ದ ಆಂಧ್ರದ ಬಲಪಂಥೀಯ ಅಭ್ಯರ್ಥಿಯಾಗಿ ಪಟ್ಟಾಬಿ ಸೀತಾರಾಮಯ್ಯನವರನ್ನು ಕಣಕ್ಕಿಳಿಸಿದರು. ಎಡಪಂಥೀಯ ಅಭ್ಯರ್ಥಿಯಾಗಿ ಸುಭಾಷ ಚಂದ್ರ ಬೋಸ್ ಸ್ಪರ್ಧಿಸಿದರು. ಆದರೆ ಅಂತಿಮವಾಗಿ ಗೆಲವು ಸುಭಾಷ ಚಂದ್ರ ಬೋಸರಿಗೆ ಲಭಿಸಿತು. ಹಾಗಾಗಿ 2ನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದರು. ತೀವ್ರಗಾಮಿಗಳಾದ ಸುಭಾಷರ ಮತ್ತು ಸಂಪ್ರದಾಯವಾದಿ ಕಾಂಗ್ರೆಸ್ಸಿಗರ ಮಧ್ಯೆ ಭಿನ್ನಾಭಿಪ್ರಾಯಗಳಿಂದಾಗಿ ಬೋಸರು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜಿನಾಮೆ ನೀಡಿದರು. ಅದೇ ವರ್ಷ ***ಫಾರ್ವರ್ಡ್ ಬ್ಲಾಕ್*** ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದರು. ಇದೆ ವೇಳೆಗೆ ಪ್ರಪಂಚದಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಬ್ರಿಟನ್ನಿನ ಗಮನ ಯುದ್ಧದಲ್ಲಿದ್ದುದರಿಂದ ಬ್ರಿಟನ್ ವಿರೋಧಿ ರಾಷ್ಟ್ರಗಳೊಡನೆ ಸ್ನೇಹ ಸಂಪಾಧನೆ ಬಹು ಸುಲಭವಾಗಿ ಪಡೆದುಕೊಳ್ಳಬಹುದೆಂಬ ನಂಬಿಕೆ ಆವರಿಸಿತು. ಹಾಗಾಗಿ ಇವರು ಜರ್ಮನಿ ಜಪಾನ್ ಇಟಾಲಿಗಳ ಸಹಾಯ ಪಡೆದು ಹೋರಾಡುವಂತೆ ಬೋಸ್ ಕರೆ ನೀಡಿದರು. ಆದರೆ ಕಾಂಗ್ರೆಸ್ ವರಿಷ್ಠರು ಬೋಸರ ವಾದವನ್ನು ಒಪ್ಪಿಕೊಳ್ಳಲಿಲ್ಲ.

**ಜರ್ಮನಿಗೆ ಪಲಾಯನ**

1941ರ ಜನವರಿಯಲ್ಲಿ ಸುಭಾಷರು ಮಧ್ಯರಾತ್ರಿ ಮುಸ್ಲಿಂ ಮೌಲ್ವಿಯ ವೇಷಧರಿಸಿ ಬ್ರಿಟೀಷ್ ಕಾಲವಲುಗಾರರ ಕಣ್ಣುತಪ್ಪಿಸಿ ಕಲ್ಕತ್ತಾದ ತಮ್ಮ ಮನೆಯಿಂದ ಹೊರಟು ಪೇಶಾವರ, ಕಾಬೂಲ್, ಮಾಸ್ಕೋ ಮುಖಾಂತರ ಜರ್ಮನಿಯ ಬರ್ಲಿನ್ ನಗರವನ್ನು ಎಪ್ರೀಲ್ 2, 1941ರಂದು ತಲುಪಿದರು. ಮಾಸ್ಕೋ ಮೂಲಕ ಬರ್ಲಿನ್ ಪ್ರಯಾಣ ಮಾಡಲು ಇಟಾಲಿಯನ್ ರಾಯಭಾರ ಕಛೇರಿಯು ವ್ಯವಸ್ಥೆ ಮಾಡಿತು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರನ ಸರ್ಕಾರದ ನೆರವಿನಿಂದ ಬೋಸರು ಸ್ವಂತತ್ರ ಭಾರತದ ಸೇನೆ (ಆಜಾದ್ ಹಿಂದ್ ಫೌಜ್ ಇಂಡಿಯನ್ ನ್ಯಾಷನಲ್ ಆರ್ಮಿ) ಯನ್ನು ಸಂಘಟಿಸಿದರು. ಯುರೋಪಿಯನ್ ಪಶ್ಚಿಮ ಏಷ್ಯಾದ ವಿವಿಧ ಯುದ್ಧ ರಂಗಗಳಲ್ಲಿ ಸೆರೆ ಸಿಕ್ಕಿದ ಸೈನಿಕರನ್ನು ಜರ್ಮನಿಗೆ ಕರೆತಂದು ಈ ಸೈನ್ಯವನ್ನು ರಚಿಸಲಾಗಿತ್ತು. ಐಎನ್‌ಎ ಸೈನಿಕರು ಸುಭಾಷರನ್ನು ನೇತಾಜಿ ಎಂದು ಘೋಷಿಸಿದರು.

ಜರ್ಮನ್ ಸರ್ಕಾರದ ಸಹಾಯವನ್ನು ಪಡೆದುಕೊಂಡು 1942ರ ವೇಳೆಗೆ ಸ್ವಂತತ್ರ ಭಾರತದ ಕೇಂದ್ರವನ್ನು ಬರ್ಲಿನ್‌ನಲ್ಲಿ ಆರಂಭಿಸಿದರು. ಕೇಂದ್ರವನ್ನು ಉದ್ಘಾಟಿಸುವ ಸಂದರ್ಭದಲ್ಲಿ ಕೆಲವು ನಿರ್ಧಾರಗಳನ್ನು ಕೈಗೊಂಡರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

- ಭಾರತೀಯರು ಪರಸ್ಪರ ಸಂಧಿಸಿದಾಗ 'ಜೈಹಿಂದ್' ಎಂದು ಹೇಳಬೇಕು.
- ಭಾರತೀಯರ ರಾಷ್ಟ್ರ ಗೀತೆ "ಜನ ಗಣ ಮನ"
- ಭಾರತದ ರಾಷ್ಟ್ರ ಭಾಷೆ "ಹಿಂದೂಸ್ಥಾನಿ"ಯನ್ನು ಬರೆಯುವಾಗ ಲ್ಯಾಟಿನ್ ಭಾಷೆಯನ್ನು ಬಳಸಬೇಕು ಎಂಬುದಾಗಿತ್ತು

1942ರಲ್ಲಿ ಸಿಂಗಪುರ ಮತ್ತು ಮಲಯಗಳು ಜಪಾನಿ ದೇಶಗಳ ವಶವಾದವು ಮಲಯ ಮತ್ತು ಸಿಂಗಾಪುರಗಳಲ್ಲಿನ ತಮ್ಮ ವಸಹಾತುಗಳ ರಕ್ಷಣೆಗಾಗಿ ಇರಿಸಲಾಗಿದ್ದ. 20,000 ಭಾರತೀಯ ಸೈನಿಕರನ್ನು ಯುದ್ಧದ ಖೈದಿಗಳನ್ನಾಗಿ ಬ್ರಿಟೀಷರು ಜಪಾನಿಗಳಿಗೆ ಒಪ್ಪಿಸಿದರು. ಜಪಾನಿನಲ್ಲಿ ನೆಲೆಸಿದ್ದ ಭಾರತೀಯ ಕ್ರಾಂತಿಕಾರಿ ನಾಯಕ ರಾಷ್ ಬಿಹಾರಿ ಭೊಸರ ಆಮಂತ್ರಣದ ಮೇರೆಗೆ ಸುಭಾಷ ಚಂದ್ರ ಬೋಸ್‌ರು ಜರ್ಮನಿಯಿಂದ ಜಪಾನ್‌ಗೆ ಅನಂತರ ಸಿಂಗಾಪುರಕ್ಕೆ ಬಂದು ಭಾರತದ ಸ್ವತಂತ್ರ ಸಂಗ್ರಾಮದ ನಾಯಕತ್ವವನ್ನು ವಹಿಸಿಕೊಂಡರು. ನೇತಾಜಿ ಜಪಾನಿಯರ ವಶವಾಗಿದ್ದ ಭಾರತೀಯರ ಸೈನಿಕರನ್ನು ಹಾಗೂ ಪೂರ್ವ ಏಷ್ಯಾದ ಸಹಸ್ರಾರು ಭಾರತೀಯ ಯುವಕರನ್ನು ಒಳಗೊಂಡಿದ್ದ ಆಜಾದ್ ಹಿಂದ್ ಫೌಜನ್ನು ಸಂಘಟಿಸಿದರು. ಇದು 30,000 ಸಶಸ್ತ್ರ ಸೈನಿಕರನ್ನು ಹೊಂದಿತ್ತು. ಡಾ.ಲಕ್ಷ್ಮೀಸ್ವಾಮಿನಾಥನ್ ಎಂಬ ವೀರ ಮಹಿಳೆ ಝಾನ್ಸಿ ರಾಣಿ ರೆಜಿಮೆಂಟಿನ ದಳಪತಿ ಮತ್ತು ಆಜಾದ್ ಹಿಂದ್ ಫೌಜ್‌ನ ಕರ್ನಲ್ ಆಗಿದ್ದರು.

**ಸಿಂಗಪೂರಿನಲ್ಲಿ ತಾತ್ಕಾಲಿಕ ಸರ್ಕಾರದ ಸ್ಥಾಪನೆ.**

1943 ಅಕ್ಟೋಬರ್ 21ರಂದು ನೇತಾಜಿಯವರು ಸಿಂಗಾಪುರದಲ್ಲಿ ತಾತ್ಕಾಲಿಕ ಆಜಾದ್ ಹಿಂದ್ ಸರ್ಕಾರವನ್ನು ಸ್ಥಾಪಿಸಿ ಅದರ ನಾಯಕತ್ವವನ್ನು ವಹಿಸಿಕೊಂಡರು. ಈ ರೀತಿ ಅಸ್ತಿತ್ವವನ್ನು ಕಂಡುಕೊಂಡ ಆಜಾದ್ ಹಿಂದ್ ಸರ್ಕಾರಕ್ಕೆ ಪ್ರಥಮತಃ ಮಾನ್ಯತೆಯನ್ನು ನೀಡಿದ ರಾಷ್ಟ್ರವೆಂದರೆ ಜಪಾನ್ ನಂತರ ಸುಮಾರು 11 ದೇಶಗಳು ಮಾನ್ಯತೆಯನ್ನು ನೀಡಿದವು.

ಪೂರ್ವ ಏಷ್ಯಾದ ರಾಷ್ಟ್ರಗಳ ಜೊತೆಗೆ ಒಂದು ಸಮ್ಮೇಳನವನ್ನು ನವೆಂಬರ್ 5, 1943ರಲ್ಲಿ ಗೊತ್ತುಪಡಿಸಿದರು. ಈ ಸಮ್ಮೇಳನದ ಸಂದರ್ಭದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಆಜಾದ್ ಹಿಂದ್ ಸರ್ಕಾರದ ಅಧೀನಕ್ಕೆ ಬಿಟ್ಟುಕೊಟ್ಟಿತು. ಆಗ ಅಂಡಮಾನ್ ದ್ವೀಪಕ್ಕೆ 'ಶಹೀದ್' ಎಂದು ಹೆಸರಿಸಿದರೆ ನಿಕೋಬಾರ್ ದ್ವೀಪವನ್ನು 'ಸ್ವರಾಜ್ಯ' ಎಂದು ನಾಮಕರಣ ಮಾಡಲಾಯಿತು. ನೇತಾಜಿಯವರು ಭಾರತದ ಸ್ವಾತಂತ್ರ್ಯ ಯೋಧರಿಗೆ 'ಚಲೋದಿಲ್ಲಿ' ಎಂಬ ವೀರ ಘೋಷಣೆಯನ್ನು ನೀಡಿದರು. ಅವರು ಥೈಲ್ಯಾಂಡ್ ಮತ್ತು ಬರ್ಮಾ ಮೂಲಕ ಆಜಾದ್ ಹಿಂದ್ ಫೌಜನ್ನು ಸಾಗಿಸಿದರು. 1944 ರಲ್ಲಿ ಬರ್ಮಾದ ರಂಗೂನನಲ್ಲಿ ಆಜಾದ್ ಹಿಂದ್ ಬ್ಯಾಂಕನ್ನು ಸ್ಥಾಪಿಸಿದರು.

**ಆಜಾದ್ ಹಿಂದ್ ಫೌಜನ ಕಾರ್ಯಾಚರಣೆ**

ಕ್ರಿ.ಶ.1944ರ ಪೆಬ್ರುವರಿಯಲ್ಲಿ ಆಜಾದ್ ಹಿಂದ್ ಫೌಜ್ ತನ್ನ ಸಂಯುಕ್ತ ಆಕ್ರಮಣವನ್ನು ಜಪಾನ್ ಸೇನೆಯೊಡನೆ ಸೇರಿಕೊಂಡು ಮಾಡಿತು. ಅರಕಾನ್ ಆಕ್ರಮಣದಲ್ಲಿ ಯಶಸ್ವಿಕಂಡ ಬೋಸ್‌ರ ತುಕಡಿ ಮಣಿಪುರದ ಇಂಫಾಲದತ್ತ ಮುನ್ನಡೆಯಿತು. ಯುದ್ಧದ ಸಂದರ್ಭದಲ್ಲಿ ಐಎನ್‌ಎ ಮತ್ತು ಜಪಾನಿನ ಸಂಯುಕ್ತ ಸೇನೆ ಗೆಲ್ಲುವಂತಹ ಪ್ರದೇಶಗಳನ್ನು ಆಜಾದ್ ಹಿಂದ್ ಸರ್ಕಾರಕ್ಕೆ ವಹಿಸಿಕೊಡುವುದಾಗಿ ಜಪಾನಿನ ಪ್ರಧಾನಿ ಜಪಾನ್ ಪಾರ್ಲಿಮೆಂಟ್‌ನಲ್ಲಿ ಘೋಷಿಸಿದರು. ಹಾಗಾಗಿ ಬ್ರಿಟೀಷರಿಂದ ಮುಕ್ತವಾದ ಪ್ರದೇಶಗಳ ಪುನರ್ ಅಭಿವೃದ್ಧಿಗೆ ಪ್ರಥಮ ಗವರ್ನರ್ ಆಗಿ "ಲೆಪ್ಟಿನೆಂಟ್ ಕರ್ನಲ್ ಚಟರ್ಜಿ" ಯವರನ್ನು ಸುಭಾಷ್ ಚಂದ್ರ ಬೋಸ್ ನೇಮಿಸಿದರು. 1944ರ ಮಾರ್ಚ 18 ರಂದು ಐಎನ್‌ಎ ಬರ್ಮಾ ಗಡಿಯನ್ನು ದಾಟಿ ಭಾರತದ ಭೂ ಪ್ರದೇಶದಲ್ಲಿ ನುಗ್ಗಿತು. ಈಶಾನ್ಯ ಭಾರತದಲ್ಲಿ ಮಣಿಪುರದ ವಿಶಾಲ ಪ್ರದೇಶವನ್ನು ಬ್ರಿಟೀಷರಿಂದ ಗೆದ್ದುಕೊಂಡು ಇಂಪಾಲದತ್ತ ಮುನ್ನುಗ್ಗಿತು. ಆದರೆ ಆ ಸಂದರ್ಭದಲ್ಲಿ ಬರ್ಮಾದಲ್ಲಿ ಭಾರಿ ಮಳೆ ಆವರಿಸಿದ್ದರಿಂದ ಭಾರತದ ವಿಮೋಚನಾ ಸೇನೆಗೆ ಆಹಾರ ಹಾಗೂ ಯದ್ಧ ಸಾಮಗ್ರಿಗಳ ಪೂರೈಕೆಯ ಮಾರ್ಗಗಳು ಜಲಾವೃತವಾದವು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಅನಿವಾರ್ಯವಾಗಿ ಐ.ಎನ್.ಎ ಮಾಂಡೇಲ್ ಮತ್ತು ರಂಗೂನ್‌ನತ್ತ ಹಿಮ್ಮೆಟ್ಟಬೇಕಾಯಿತು. ಶತ್ರು ಪಡೆಗಳು ರಂಗೂನ್‌ನತ್ತ ಮುನ್ನುಗ್ಗುತ್ತಿದ್ದರಿಂದ 1945ರ ಎಪ್ರೀಲ್‌ನಲ್ಲಿ ನೇತಾಜಿ ಮತ್ತು ತಾತ್ಕಾಲಿಕ ಸರ್ಕಾರದ ಮಂತ್ರಿಗಳು ರಂಗೂನ್‌ನಿಂದ ಹೊರಟು ಬ್ಯಾಂಕಾಕ್‌ನ್ನು ತಲುಪಿದರು. 1945ರ ಮೇ ತಿಂಗಳಲ್ಲಿ ಜರ್ಮನಿಯು ಮಿತ್ರ ರಾಷ್ಟ್ರಗಳ ಸೈನ್ಯಕ್ಕೆ ಶರಣಾಗತವಾಯಿತು. ನೇತಾಜಿಯವರು ಸಿಂಗಾಪುರಕ್ಕೆ ಆಗಮಿಸಿ ತಮ್ಮ ತಾತ್ಕಾಲಿಕ ಸರ್ಕಾರದ ಸಚಿವರನ್ನು ಭವಿಷ್ಯತ್ತಿನ ಬಗ್ಗೆ ಸಮಾಲೋಚಿಸಿದರು. ವಿಜೇತ ಬ್ರಿಟೀಷರು ಸಿಂಗಾಪುರದಲ್ಲಿ ನೇತಾಜಿಯವರನ್ನು ಬಂಧಿಸುವುದು ಖಚಿತವಾದ್ದರಿಂದ ಅವರು ಮಂಚೂರಿಯ ಮುಖಾಂತರ ಮಾಸ್ಕೋ ನಗರಕ್ಕೆ ಹೋಗಲು ತಿರ್ಮಾನಿಸಿದರು. 1945ರ ಆಗಸ್ಟ್ 16ರಂದು ನೇತಾಜಿ ಸಿಂಗಾಪುರದಿಂದ ವಿಮಾನದಲ್ಲಿ ಬ್ಯಾಂಕಾಕಿಗೆ ತೆರಳಿ ಮರುದಿನ ಸೈಗಾನ್ ತಲುಪಿದರು. ಆಗಸ್ಟ್ 17ರಂದು ಸೈಗಾನ್‌ನಿಂದ ವಿಮಾನದಲ್ಲಿ ಪ್ರಯಾಣ ಮಾಡಿದ ಸುಭಾಷ್‌ಚಂದ್ರ ಬೋಸರು ಎಲ್ಲಿಗೆ ಹೋದರು ಎಂಬುದು ನಿಗೂಡವಾಗಿ ಉಳಿಯಿತು. 1945ರ ಆಗಸ್ಟ್ 22ರಂದು ಟೋಕಿಯೋ ರೇಡಿಯೋ ಮಾಡಿದ ವಾರ್ತಾ ಪ್ರಸಾರದ ಪ್ರಕಾರ ನೇತಾಜಿಯವರು ಜಪಾನಿಗೆ ತೆರಳುವ ಮಾರ್ಗದ ಪಾರ್ಮೋಸಾದಲ್ಲಿ ವಿಮಾನ ಅಪಘಾತದಲ್ಲಿ ನಿಧನ ಹೊಂದಿದರು.

**ಉಪಸಂಹಾರ**

ಸರ್ವಾಧಿಕಾರಿ ಶಕ್ತಿಗಳ ಸಹಕಾರದಿಂದ ಸ್ವಾಂತತ್ರ್ಯವನ್ನು ಗಳಿಸುವ ಬೋಸರವರ ಹೋರಾಟದ ಸ್ವರೂಪವನ್ನು ಆ ಕಾಲಕ್ಕೆ ಅನೇಕ ಭಾರತೀಯ ರಾಷ್ಟ್ರೀಯವಾದಿಗಳು ಟೀಕಿಸಿದರೂ ಐಎನ್‌ಎ ಸಂಘಟಿಸಿ ಅವರು ಭಾರತೀಯ ಜನತೆಯ ಮುಂದೆ ಮತ್ತು ಭಾರತೀಯ ಸೈನ್ಯದ ಮುಂದೆ ದೇಶ ಪ್ರೇಮದ ಸ್ಪೂರ್ತಿಗೆ ಉದಾಹರಣೆಯನ್ನು ಸೃಷ್ಟಿಸಿದರು. ಅವರನ್ನು ಇಡಿ ದೇಶವು ನೇತಾಜಿಯೆಂದು ಸಂಭೋಧಿಸಿತು. ಉಜ್ವಲ ದೇಶಭಕ್ತ , ಕೆಚ್ಚೆದೆಯ ಸ್ವಾತಂತ್ರ್ಯ ಯೋಧ, ಅನುಪಮ, ತ್ಯಾಗ, ನಿಸ್ವಾರ್ಥ ದೇಶಸೇವೆ, ಹಾಗೂ ರೋಮಾಂಚನಕಾರಿ ಸಶಸ್ತ್ರ ಸಂಘರ್ಷ ಇಂದಿನ ಹಾಗೂ ಮುಂದಿನ ಭಾರತೀಯ ಪೀಳಿಗೆಗೆ ಸ್ಪೂರ್ತಿ

ಚಿಲುಮೆಯಾಗಿರುವ ಐಂದ್ರ ಜಾಲಿಕ 'ಜೈ ಹಿಂದ್' ಘೋಷಣೆಯ ನೇತಾಜಿಯವರು ಭಾರತೀಯರಿಗಿತ್ತ ಅಮರ ಕೊಡುಗೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಿಪಿನ್ ಚಂದ್ರ. (2012). ಆಧುನಿಕ ಭಾರತದ ಇತಿಹಾಸ. ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಚಂದ್ರಶೇಖರಪ್ಪ ಟಿ.ಜಿ. (2012). ಆಧುನಿಕ ಭಾರತದ ಇತಿಹಾಸ. ಪೂರ್ಣ ಪ್ರಕಾಶನ, ಶಿವಮೊಗ್ಗ.
- ಜೋಷಿ ಡಿ.ಟಿ. (2010) ಆಧುನಿಕ ಭಾರತದ ಇತಿಹಾಸ. ವಿದ್ಯಾನಿಧಿ ಪ್ರಕಾಶನ, ಗದಗ.
- Agni Hotri V.K. (2013). Indian History and Culture. Allied Publishes private Ltd, New Delhi.
- Grover Alka Mehta (2010). Modern Indian History. S Chand & Company Ltd, New Delhi.
- Majumdar. R.C & A.K majumdar. (2003). Struggle for freedom. Bhartiya Vidya Bhavan, Mumbai.


IIMRD JOURNALS